# ಬಹು ಆಯ್ಕೆಯ ಪ್ರಶ್ನೆಗಳು

**1. ನಾವು ನಮ್ಮ ಉಳಿತಾಯದ ಹಣವನ್ನು ಯಾಕೆ ಬ್ಯಾಂಕಿನಲ್ಲಿಡಬೇಕು?**

ಅ. ಅದು ಸುರಕ್ಷಿತವಾಗಿರುತ್ತದೆ

ಆ. ಬಡ್ಡಿ ದೊರೆಯುತ್ತದೆ

ಇ. ಯಾವಾಗ ಬೇಕಿದ್ದರೂ ಅದನ್ನು ಹಿಂಪಡೆಯಬಹುದು

ಈ. ಈ ಮೇಲಿನ ಎಲ್ಲವೂ

**2. ಬ್ಯಾಂಕುಗಳು ಈ ಕೆಳಗಿನ ಯಾವುದರ ಮೇಲೆ ಸಾಲ ನೀಡುವುದಿಲ್ಲ?**

ಅ. ಚಿನ್ನಾಭರಣಗಳು

ಆ. ಜೀವವಿಮಾ ಪಾಲಿಸಿಗಳು

ಇ. ಲಾಟರಿ ಟಿಕೆಟ್

ಈ. ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟುಗಳು

**3. ಭಾರತದಲ್ಲಿ ಅತಿ ಹೆಚ್ಚು ಶಾಖೆಗಳನ್ನು ಹೊಂದಿರುವ ಬ್ಯಾಂಕು ಯಾವುದು?**

ಅ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ

ಆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ

ಇ. ಪಂಜಾಬ್ ನ್ಯಾಶನಲ್ ಬ್ಯಾಂಕ್

ಈ. ಬ್ಯಾಂಕ್ ಆಫ್ ಬರೋಡಾ

**4. ಒಂದು ನೂರು ರೂಪಾಯಿ ನೋಟಿನ ಮೇಲೆ___________ಇವರ ಸಹಿ ಇದೆ.**

ಅ. ಪ್ರಧಾನಮಂತ್ರಿ

ಆ. ಹಣಕಾಸು ಸಚಿವರು

ಇ. ಆರ್‌ಬಿಐ ಗವರ್ನರ್

ಈ. ಈ ಮೇಲಿನ ಯಾರದ್ದೂ ಅಲ್ಲ.

**5. ಎಟಿಎಂ ಪಾಸ್‌ವರ್ಡ್‌ನ್ನು ಇಡಬೇಕಾದ ಜಾಗ________________**

ಅ. ವೈಯಕ್ತಿಕ ದಿನಚರಿ ಪುಸ್ತಕ

ಆ. ಕಚೇರಿ ದಿನಚರಿ ಪುಸ್ತಕ

ಇ. ನೆನಪು

ಈ. ಈ ಮೇಲಿನ ಎಲ್ಲವೂ

**6. ಎಟಿಎಂ ಪಾಸ್‌ವರ್ಡ್‌ನ್ನು ಯಾರ ಜೊತೆ ಮಾತ್ರ ಹಂಚಿಕೊಳ್ಳಬಹುದು?**

ಅ. ಬಾಳಸಂಗಾತಿ

ಆ. ವಿಧೇಯ ಮಗ

ಇ. ವಿಧೇಯ ಮಗಳು

ಈ. ಈ ಮೇಲಿನ ಯಾರೊಡನೆಯೂ ಅಲ್ಲ

**7. ನಾಮನಿರ್ದೇಶನವನ್ನು ಈ ಕೆಳಗಿನ ಯಾವ ಖಾತೆಗೆ ಮಾಡಲಾಗುತ್ತದೆ?**

ಅ. ಬ್ಯಾಂಕ್ ಉಳಿತಾಯ ಖಾತೆ

ಆ. ಆವರ್ತಕ ಠೇವಣಿ ಖಾತೆ

ಇ. ನಿರಖು ಠೇವಣಿ ಖಾತೆ

ಈ. ಈ ಮೇಲಿನ ಎಲ್ಲವೂ

**8. ಈಗಿನ ಆರ್‌ಬಿಐ ಗವರ್ನರ್ ಯಾರು?**

ಅ. ಕೆ.ಸಿ.ಚಕ್ರವರ್ತಿ

ಆ. ಡಿ.ಕೆ.ಮಿತ್ತಲ್

ಇ. ರಘುರಾಮ್ ರಾಜನ್

ಈ. ಮೊಂಟೆಕ್ ಸಿಂಗ್ ಅಹ್ಲುವಾಲಿಯಾ

**9. –ಇದು ಯಾವುದರ ಲಾಂಛನವಾಗಿದೆ?**

ಅ. ಪ್ರಧಾನ ಮಂತ್ರಿ ಜನ್ ಧನ್ ಯೋಜನೆ

ಆ. ಪಂಜಾಬ್ ನ್ಯಾಶನಲ್ ಬ್ಯಾಂಕ್

ಇ. ಬ್ಯಾಂಕ್ ಆಫ್ ಬರೋಡಾ

ಈ. ಈ ಮೇಲಿನ ಯಾವುದರದ್ದೂ ಅಲ್ಲ

**10. ಬ್ಯಾಂಕಿನಲ್ಲಿ ಉಳಿತಾಯ ಖಾತೆ ತೆರೆಯಲು ಅವಶ್ಯವಾದ ಕನಿಷ್ಠ ವಯಸ್ಸು ಯಾವುದು?**

ಅ. ಎಂಟು ವರ್ಷ

ಆ. ಹತ್ತು ವರ್ಷ

ಇ. ಹನ್ನೆರಡು ವರ್ಷ

ಈ. ಈ ಮೇಲಿನ ಯಾವುದೂ ಅಲ್ಲ

**11. ಈ ಕೆಳಗಿನ ಯಾವ ಸಾಲವನ್ನು ಬ್ಯಾಂಕುಗಳು ನೀಡುವುದಿಲ್ಲ?**

ಅ. ಬೆಳೆ ಸಾಲ

ಆ. ಶಿಕ್ಷಣ ಸಾಲ

ಇ. ಗೃಹ ಸಾಲ

ಈ. ಕುಡಿತ ಮತ್ತು ಜೂಜಿನ ಸಾಲ

**12. 'ಕೆವೈಸಿ'–ಇದರ ಪೂರ್ಣರೂಪವೇನು?**

ಅ. ನೊ ಯುವರ್ ಕಸ್ಟಮರ್

ಆ. ನೊ ಯುವರ್ ಕ್ಯಾರೆಕ್ಟರ್

ಇ. ಈ ಮೇಲಿನ ಎರಡೂ

ಈ. ಈ ಮೇಲಿನದ್ದು ಯಾವುದೂ ಅಲ್ಲ.

**13. ಮಾರವಾಡಿಗಳಿಂದ ಪಡೆಯುವ ಸಾಲದ ಹಣಕ್ಕೆ________________.**

ಅ. ಅತ್ಯಧಿಕ ಬಡ್ಡಿದರವಿರುತ್ತದೆ

ಆ. ಸರಿಯಾದ ಲೆಕ್ಕಪತ್ರವಿರುವುದಿಲ್ಲ

ಇ. ಪಾರದರ್ಶಕತೆ ಇರುವುದಿಲ್ಲ

ಈ. ಈ ಮೇಲಿನ ಎಲ್ಲವೂ ಇರುತ್ತದೆ

**14. 'ಎಟಿಎಂ' ಎಂದರೆ_____________.**

ಅ. ಎನಿ ಟೈಂ ಮನಿ

ಆ. ಆಟೋ ಟ್ರಕ್ ಆಫ್ ಮಹೀಂದ್ರ

ಇ. ಆಟೋಮೇಟೆಡ್ ಟೆಲ್ಲರ್ ಮೆಷೀನ್

ಈ. ಈ ಮೇಲಿನ ಯಾವುದೂ ಅಲ್ಲ.

**15. ಸಮಯಕ್ಕೆ ಸರಿಯಾಗಿ ಸಾಲ ಮರುಪಾವತಿ ಮಾಡಿದರೆ ಆಗುವ ಪ್ರಯೋಜನವೇನು?**

ಅ. ಒಳ್ಳೆಯ ಹೆಸರು ಬರುತ್ತದೆ

ಆ. ಯಾವುದೇ ಒತ್ತಡವಿರುವುದಿಲ್ಲ

ಇ. ಭವಿಷ್ಯದಲ್ಲಿ ಸುಲಭವಾಗಿ ಸಾಲ ದೊರೆಯುತ್ತದೆ

ಈ.ಈ ಮೇಲಿನ ಎಲ್ಲವೂ

**16. ಸಾಲದ ಸುಸ್ತಿದಾರ ಎಂದರೆ_____________.**

ಅ. ಸಾಲದ ಕಂತುಗಳನ್ನು ಕಟ್ಟದಿರುವುದು

ಆ. ಕೆಟ್ಟ ಹೆಸರು

ಇ. ನ್ಯಾಯಬಾಹಿರ ಚಟುವಟಿಕೆಗಳು

ಈ. ಈ ಮೇಲಿನ ಯಾವುದೂ ಅಲ್ಲ

**17. 'ಜೀವ ವಿಮೆ' ಎಂದರೇನು?**

ಅ. ಮಾನವನ ವಿಮೆ

ಆ. ಮಾನವ ಮತ್ತು ಜಾನುವಾರುಗಳ ಜೀವ ವಿಮೆ

ಇ. ಯಂತ್ರಗಳ ಜೀವ ವಿಮೆ

ಈ. ಈ ಮೇಲಿನ ಎಲ್ಲವೂ

**18. ___________ಯ ವಿರುದ್ಧ ಮಾಡುವ ವಿಮೆಯನ್ನು ಜನರಲ್ ಇನ್ಶೂರೆನ್ಸ್ ಎನ್ನುತ್ತಾರೆ.**

ಅ. ಬೆಂಕಿ

ಆ. ಕಳ್ಳತನ

ಇ. ದರೋಡೆ

ಈ. ಈ ಮೇಲಿನ ಎಲ್ಲವೂ

**19. 'ಆಧಾರ್' ಎಂದರೆ___________**

ಅ. ಹನ್ನೆರಡು ಅಂಕೆಗಳ ಕಾರ್ಡು

ಆ. ಯುಐಡಿಎಐ ಕೊಡುವ ಗುರುತು ಪ್ರಮಾಣ ದಾಖಲೆ

ಇ. ಈ ಮೇಲಿನ ಎರಡೂ

ಈ. ಈ ಮೇಲಿನ ಯಾವುದೂ ಅಲ್ಲ

**20. 'ಇ ಅಥವಾ ಎಸ್' ಎಂದರೇನು?**

ಅ. ಈಸ್ಟ್ ಓರ್ ಸೌತ್ ಝೋನ್

ಆ. ಈಝಿ ಆ್ಯಂಡ್ ಸ್ವಿಫ್ಟ್

ಇ. ಐದರ್ ಓರ್ ಸರ್ವೈವರ್

ಈ. ಈ ಮೇಲಿನ ಯಾವುದೂ ಅಲ್ಲ

**21. ಕರೆನ್ಸಿ ನೋಟುಗಳಲ್ಲಿ ಯಾವುದನ್ನು ಬರೆಯದಂತೆ ನಿಷೇಧಿಸಲಾಗಿದೆ?**

ಅ. ರಾಜಕೀಯ ಸಂದೇಶ

ಆ. ಧಾರ್ಮಿಕ ಸಂದೇಶ

ಇ. ವೈಯಕ್ತಿಕ ಸಂದೇಶ

ಈ. ಈ ಮೇಲಿನ ಎಲ್ಲವೂ

**22. 'ಪಿಪಿಎಫ್' ಎಂದರೇನು?**

ಅ. ಪೆನ್ಶನ್ ಪ್ಲಾನಿಂಗ್ ಫಂಡ್ಸ್

ಆ. ಪರ್ಸನ್ ಹ್ಯಾವಿಂಗ್ ಪೆನ್ಶನ್ ಫೆಸಿಲಿಟೀಸ್

ಇ. ಪಬ್ಲಿಕ್ ಪ್ರಾವಿಡೆಂಟ್ ಫಂಡ್

ಈ. ಪರ್ಮನೆಂಟ್ ಪ್ರಾಕ್ಟೀಷನರ್ಸ್ ಫೋರಂ

**23. ಆರ್‌ಬಿಐ ಹೊರಡಿಸಿರುವ ಕರೆನ್ಸಿ ನೋಟುಗಳ ಗರಿಷ್ಠ ಮೌಲ್ಯ ಯಾವುದು?**

ಅ. ಒಂದು ನೂರು ರೂಪಾಯಿ

ಆ. ಐನೂರು ರೂಪಾಯಿ

ಇ. ಒಂದು ಸಾವಿರ ರೂಪಾಯಿ

ಈ. ಹತ್ತು ಸಾವಿರ ರೂಪಾಯಿ

**24. 'ಎನ್ನಾರೈ' ಎಂದರೆ_____________.**

ಅ. ನಾನ್ ರೂರಲ್ ಇಂಡಿವಿಜುವಲ್ಸ್

ಆ. ನಾನ್ ರೂರಲ್ ಇಮಿಗ್ರೆಂಟ್ಸ್

ಇ. ನಾನ್ ರೆಸಿಡೆಂಟ್ ಇಂಡಿಯನ್

ಈ. ಈ ಮೇಲಿನ ಯಾವುದೂ ಅಲ್ಲ.

**25. 'ಪಾನ್' ಎಂದರೇನು?**

ಅ. ಒಂದು ಬಗೆಯ ಪಾತ್ರೆ

ಆ. ಪ್ರೈಮರಿ ಅಕೌಂಟ್ ನಂಬರ್

ಇ. ಪರ್ಮನೆಂಟ್ ಅಕೌಂಟ್ ನಂಬರ್

ಈ. ಈ ಮೇಲಿನ ಯಾವುದೂ ಅಲ್ಲ

**26. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಈಗಿನ ಅಧ್ಯಕ್ಷರು ಯಾರು?**

ಅ. ಆರುಂಧತಿ ಭಟ್ಟಾಚಾರ್ಯ

ಆ. ಒ.ಪಿ.ಭಟ್

ಇ. ಪ್ರತೀಪ್ ಚೌಧುರಿ

ಈ. ಚಂದಾ ಕೊಚಾರ್

**27. ಬ್ಯಾಂಕು ಯಾವುದಕ್ಕೆ ಸಾಲ ನೀಡುತ್ತದೆ?**

ಅ. ಗೃಹ

ಆ. ಕಾರು

ಇ. ಶಿಕ್ಷಣ

ಈ. ಈ ಮೇಲಿನ ಎಲ್ಲದಕ್ಕೂ

**28. ಯಾವ ಕರೆನ್ಸಿ ನೋಟಿನಲ್ಲಿ ಭದ್ರತೆಯ ದಾರವಿದೆ?**

ಅ. ಐವತ್ತು ರೂಪಾಯಿ

ಆ. ನೂರು ರೂಪಾಯಿ

ಇ. ಐನೂರು ರೂಪಾಯಿ

ಈ. ಈ ಮೇಲಿನ ಎಲ್ಲ ನೋಟುಗಳಲ್ಲಿ

**29. ಹಣವನ್ನಿಡುವ ಅತ್ಯಂತ ಸುರಕ್ಷಿತ ಸ್ಥಳ_____________.**

ಅ. ನೆಲದಲ್ಲಿ ತೋಡಿದ ಹೊಂಡ

ಆ. ಇಸ್ತ್ರಿ ಪೆಟ್ಟಿಗೆ

ಇ. ಬ್ಯಾಂಕು

ಈ. ಮಾರವಾಡಿ

**30. ಚಿನ್ನ ಮತ್ತು ಬೆಳ್ಳಿಯ ಆಭರಣಗಳನ್ನು ಬ್ಯಾಂಕು ಲಾಕರ್‌ಗಳಲ್ಲಿ ಯಾಕೆ ಇಡಬೇಕು?**

ಅ. ಅದು ಸುರಕ್ಷಿತ

ಆ. ಕಳ್ಳತನದ ಅಪಾಯವಿಲ್ಲ

ಇ. ಈ ಮೇಲಿನ ಎರಡೂ

ಈ. ಈ ಮೇಲಿನ ಯಾವುದೂ ಅಲ್ಲ

**31. ಕರೆನ್ಸಿ ನೋಟುಗಳನ್ನು ಯಾರು ಹೊರಡಿಸುತ್ತಾರೆ?**

ಅ. ಆರ್‌ಬಿಐ

ಆ. ನಬಾರ್ಡ್

ಇ. ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳು

ಈ. ಕೇಂದ್ರ ಸರಕಾರ

**32. ನಾಣ್ಯಗಳನ್ನು ಯಾರು ಹೊರಡಿಸುತ್ತಾರೆ?**

ಅ. ಭಾರತ ಸರಕಾರ

ಆ. ನಬಾರ್ಡ್

ಇ. ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳು

ಈ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ

**33. ಬ್ಯಾಂಕ್ ಪಾಸ್ ಪುಸ್ತಕವು ____________.**

ಅ. ಬ್ಯಾಂಕಿನಿಂದ ನೀಡಲ್ಪಡುತ್ತದೆ
ಆ. ಬ್ಯಾಂಕ್ ಖಾತೆಯ ಆರ್ಥಿಕ ವ್ಯವಹಾರಗಳ ವಿವರಗಳನ್ನು ಒಳಗೊಂಡಿದೆ
ಇ. ಖಾತೆಯಲ್ಲಿರುವ ಶಿಲ್ಕನ್ನು ತೋರಿಸುತ್ತದೆ
ಈ. ಈ ಮೇಲಿನ ಎಲ್ಲವೂ

**34. ಬ್ಯಾಂಕುಗಳು ____________ ಬಡ್ಡಿಯನ್ನು ನೀಡುತ್ತವೆ.**
ಅ. ಠೇವಣಿಗಳಿಗೆ
ಆ. ಸಾಲಗಳಿಗೆ
ಇ. ಈ ಮೇಲಿನ ಎರಡಕ್ಕೂ
ಈ. ಈ ಮೇಲಿನ ಯಾವುದಕ್ಕೂ ಇಲ್ಲ

**35. ಬ್ಯಾಂಕುಗಳು ____________ ಬಡ್ಡಿಯನ್ನು ವಿಧಿಸುತ್ತವೆ.**
ಅ. ಠೇವಣಿಗಳಿಗೆ
ಆ. ಸಾಲಗಳಿಗೆ
ಇ. ಈ ಮೇಲಿನ ಎರಡಕ್ಕೂ
ಈ. ಈ ಮೇಲಿನ ಯಾವುದಕ್ಕೂ ಇಲ್ಲ

**36. ಶಿಕ್ಷಣ ಸಾಲಗಳು____________________.**
ಅ. ಬೋಧನಾ ಶುಲ್ಕ ಮತ್ತು ಖರ್ಚುಗಳನ್ನು ಒಳಗೊಂಡಿವೆ
ಆ. ಕೋರ್ಸು ಮುಗಿದ ಮೇಲೆ ಮರುಪಾವತಿಸಬಲ್ಲಂಥವುಗಳು
ಇ. ಭಾರತ ಮತ್ತು ವಿದೇಶಗಳಲ್ಲಿ ಅಧ್ಯಯನಕ್ಕಾಗಿರುವ ಅನುದಾನ
ಈ. ಈ ಮೇಲಿನ ಎಲ್ಲವೂ

**37. 'ಬಿಸಿನೆಸ್ ಕರೆಸ್ಪಾಂಡೆಂಟ್' ಎಂದರೆ ಯಾರು?**
ಅ. ಬ್ಯಾಂಕಿಂಗ್ ಸೇವೆಗಳನ್ನು ಒದಗಿಸುವ ಏಜೆಂಟ್
ಆ. ಉದ್ಯಮ ವಲಯದ ಏಜೆಂಟ್
ಇ. ಮಾರವಾಡಿಯಂಥವನು
ಈ. ಈ ಮೇಲಿನ ಯಾರೂ ಅಲ್ಲ

**38. 'ಇಂಟೆರ್‌ನೆಟ್ ಬ್ಯಾಂಕಿಂಗ್' ಯಾವುದಕ್ಕೆ ಸಂಬಂಧಿಸಿದ್ದು?**
ಅ. ಇಂಟೆರ್‌ನೆಟ್ ಮೂಲಕ ಖಾತೆ ವ್ಯವಹಾರ ನಡೆಸುವುದಕ್ಕೆ
ಆ. ಎಟಿಎಂ ಮುಖಾಂತರ ಖಾತೆಯನ್ನು ತೆರೆಯುವುದಕ್ಕೆ
ಇ. ಈ ಮೇಲಿನ ಎರಡೂ
ಈ. ಈ ಮೇಲಿನ ಯಾವುದೂ ಅಲ್ಲ

**39. ಒಂದು ಬಾರಿ ಮಾಡಿದ ನಾಮನಿರ್ದೇಶನವನ್ನು______________.**
ಅ. ರದ್ದು ಮಾಡುವಂತಿಲ್ಲ
ಆ. ರದ್ದು ಮಾಡಬಹುದು
ಇ. ಬದಲಾವಣೆ ಮಾಡುವಂತಿಲ್ಲ
ಈ. ಈ ಮೇಲಿನ ಯಾವುದೂ ಅಲ್ಲ

**40. ಯಾರು ಬ್ಯಾಂಕ್ ಖಾತೆಯನ್ನು ತೆರೆಯಬಹುದು?**
ಅ. ಭಾರತೀಯ ಪ್ರಜೆ
ಆ. ಅನಿವಾಸಿ ಭಾರತೀಯ
ಇ. ಅನಕ್ಷರಸ್ಥ
ಈ. ಈ ಮೇಲಿನ ಎಲ್ಲರೂ

**41. 'ಪಾನ್' ನಂಬರ್ ಯಾವುದಕ್ಕೆ ಬೇಕು?**
ಅ. ರೂ. 50,000ಕ್ಕೂ ಕಡಿಮೆ ಮೊತ್ತದ ಠೇವಣಿಗಳಿಗೆ

ಆ. ರೂ. ಒಂದು ಲಕ್ಷಕ್ಕಿಂತ ಅಧಿಕ ಮೊತ್ತದ ಠೇವಣಿಗಳಿಗೆ

ಇ. ರೂ. 50,000 ಮತ್ತು ಅದಕ್ಕಿಂತ ಹೆಚ್ಚಿನ ಮೊತ್ತದ ಠೇವಣಿಗಳಿಗೆ

ಈ. ಎಲ್ಲ ಆರ್ಥಿಕ ವ್ಯವಹಾರಗಳಿಗೆ

**42. 'ಟಿಡಿಎಸ್'–ಇದರ ಪೂರ್ಣ ರೂಪವೇನು?**

ಅ. ಟೈಮ್ ಡೆಪೊಸಿಟ್ ಸ್ಕೀಂ

ಆ. ಟೋಟಲ್ ಡೆಪೊಸಿಟ್ ಸ್ಕೀಂ

ಇ. ಟ್ಯಾಕ್ಸ್ ಡಿಡಕ್ಟೆಡ್ ಎಟ್ ಸೋರ್ಸ್

ಈ. ಈ ಮೇಲಿನ ಯಾವುದೂ ಅಲ್ಲ

**43. ಚೆಕ್ ಒಂದರ ಗರಿಷ್ಠ ಮೊತ್ತವು__________ಆಗಿದೆ.**

ಅ. ಒಂದು ನೂರು ಕೋಟಿ ರೂಪಾಯಿಗಳು

ಆ. ಯಾವುದೇ ಮಿತಿ ಇಲ್ಲ

ಇ. ಒಂದು ಕೋಟಿ ರೂಪಾಯಿಗಳು

ಈ. ಈ ಮೇಲಿನ ಯಾವುದೂ ಅಲ್ಲ

**44. ಬ್ಯಾಂಕ್ ಡ್ರಾಫ್ಟ್‌ನ್ನು ಯಾರು ಹೊರಡಿಸುತ್ತಾರೆ?**

ಅ. ಖಾಸಗಿ ವಲಯದ ಬ್ಯಾಂಕುಗಳು

ಆ. ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು

ಇ. ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳು

ಈ. ಈ ಮೇಲಿನ ಎಲ್ಲವೂ

**45. ಸ್ವಸಹಾಯ ಗುಂಪುಗಳು____________ನ್ನು ಒಳಗೊಂಡಿರುತ್ತವೆ.**

ಅ. ಐದರಿಂದ ಇಪ್ಪತ್ತು ಮಂದಿಯ ಗುಂಪು

ಆ. ನಿಯತವಾದ ಉಳಿತಾಯ ಅಭ್ಯಾಸಗಳು

ಇ. ಗುಂಪಿನ ಸದಸ್ಯರ ನಡುವೆ ಸಾಲ ನೀಡುವ ಆಂತರಿಕ ವ್ಯವಸ್ಥೆ

ಈ. ಈ ಮೇಲಿನ ಎಲ್ಲವೂ

**46. ಚೆಕ್ ಪಾವತಿಯನ್ನು ____________ರವರು ನಿಲ್ಲಿಸಬಹುದು.**

ಅ. ಫಲಾನುಭವಿಗಳು

ಆ. ನಾಮನಿರ್ದೇಶಗೊಂಡ ವ್ಯಕ್ತಿ

ಇ. ಚೆಕ್‌ನ್ನು ಪಡೆದುಕೊಂಡವನು

ಈ. ಈ ಮೇಲಿನ ಎಲ್ಲರೂ

**47. 'ಖಾತೆ ಪಾವತಿಗಾಗಿ ಮಾತ್ರ' ಚೆಕ್ ನ್ನು ____________ಮಾತ್ರ ನೀಡಬಹುದು.**

ಅ. ಬ್ಯಾಂಕಿನ ನಗದು ಕೌಂಟರಿನಲ್ಲಿ

ಆ. ಎಟಿಎಂ ನಲ್ಲಿ

ಇ. ಬ್ಯಾಂಕಿನ ಖಾತೆಯಲ್ಲಿ ಠೇವಣಿ ಇರಿಸುವುದಕ್ಕಾಗಿ

ಈ. ಈ ಮೇಲಿನ ಯಾವುದೂ ಅಲ್ಲ

**48. ಆವರ್ತಕ ಠೇವಣಿಗಳಲ್ಲಿ________________.**

ಅ. ಒಂದು ನಿರ್ದಿಷ್ಟ ಮೊತ್ತವನ್ನು ಪ್ರತಿ ತಿಂಗಳು ಹೂಡಲಾಗುವುದು

ಆ. ಠೇವಣಿಯ ಅವಧಿಯು ಒಂದು ನಿಗದಿತ ಅವಧಿಯಾಗಿರುತ್ತದೆ

ಇ. ಎಫ್‌ಡಿಆರ್ ದರದಲ್ಲಿ ಬಡ್ಡಿಯನ್ನು ಪಾವತಿಸಲಾಗುವುದು

ಈ. ಈ ಮೇಲಿನ ಎಲ್ಲವೂ

**49. ನಾಮನಿರ್ದೇಶನ ಮಾಡುವಾಗ ನಾಮನಿರ್ದೇಶಿತ ವ್ಯಕ್ತಿಯ ಸಹಿಯು ಯಾವುದರಲ್ಲಿ ಅವಶ್ಯವಾಗಿದೆ?**

ಅ. ಖಾತೆ ತೆರೆಯುವ ಫಾರಂನಲ್ಲಿ

ಆ. ನಾಮನಿರ್ದೇಶನದ ಫಾರಂನಲ್ಲಿ

ಇ. ಅಫಿದಾವಿತ್ ನಲ್ಲಿ
ಈ. ಈ ಮೇಲಿನ ಯಾವುದರಲ್ಲೂ ಬೇಡ

**50. ಬ್ಯಾಂಕ್ ಉಳಿತಾಯ ಠೇವಣಿಗಳ ಬಡ್ಡಿಯನ್ನು __________ನೀಡಲಾಗುವುದು.**

ಅ. ಪ್ರತಿ ತಿಂಗಳು
ಆ. ಮೂರು ತಿಂಗಳಿಗೊಮ್ಮೆ
ಇ. ಅರ್ಧ ವರ್ಷಕ್ಕೊಮ್ಮೆ
ಈ. ವರ್ಷಕ್ಕೊಮ್ಮೆ

**51. ಹಾನಿಗೊಳಗಾದ ನೋಟುಗಳನ್ನು ಏನು ಮಾಡಬೇಕು?**

ಅ. ಸುಟ್ಟು ಹಾಕಬೇಕು
ಆ. ಬಿಸಾಕಬೇಕು
ಇ. ಬ್ಯಾಂಕಿನಲ್ಲಿ ವಿನಿಮಯ ಮಾಡಿಕೊಳ್ಳಬಹುದು
ಈ. ಈ ಮೇಲಿನ ಯಾವುದೂ ಅಲ್ಲ

**52. 'ಎಟಿಎಂ'ನ್ನು ಯಾವುದಕ್ಕೆ ಬಳಸಬಹುದು?**

ಅ. ನಗದು ಹಿಂದೆಗೆಯಲು
ಆ. ಖಾತೆ ವಿಚಾರಣೆ ನಡೆಸಲು
ಇ. ಲೆಕ್ಕಾಚಾರ ತಖ್ತೆಗಾಗಿ
ಈ. ಈ ಮೇಲಿನ ಎಲ್ಲದಕ್ಕೂ

**53. ಕೌಂಟರ್ ನಲ್ಲಿ ನಕಲಿ ನೋಟು ಪತ್ತೆಯಾದಾಗ ಬ್ಯಾಂಕು ತೆಗೆದುಕೊಳ್ಳುವ ಕ್ರಮ ಏನು?**

ಅ. ಬ್ಯಾಂಕು ಆ ನೋಟನ್ನು ಗ್ರಾಹಕನಿಗೆ ಮರಳಿಸುತ್ತದೆ
ಆ. ಸಾಚಾ ನೋಟಿನೊಂದಿಗೆ ವಿನಿಮಯ ಮಾಡಿಕೊಳ್ಳುತ್ತದೆ
ಇ. ಖಾತೆಯಲ್ಲಿ ಠೇವಣಿ ಇರಿಸುತ್ತದೆ
ಈ. ನೋಟನ್ನು ಮುಟ್ಟುಗೋಲು ಹಾಕಿ ರಶೀದಿಯನ್ನು ನೀಡುತ್ತದೆ

**54. ನಿರಖು ಠೇವಣಿಯನ್ನು______________**

ಅ. ಪಕ್ವಗೊಳ್ಳುವ ಅವಧಿ ಮುಕ್ತಾಯಕ್ಕಿಂತ ಮೊದಲು ಹಿಂದೆಗೆದುಕೊಳ್ಳುವಂತಿಲ್ಲ
ಆ. ಪಕ್ವಗೊಳ್ಳುವ ಅವಧಿ ಮುಗಿದ ಅನಂತರವೇ ಪಾವತಿಸಲಾಗುವುದು
ಇ. ಪಕ್ವಗೊಳ್ಳುವುದಕ್ಕಿಂತ ಮೊದಲು ಹಿಂಪಡೆಯಬಹುದು
ಈ. ಈ ಮೇಲಿನ ಎಲ್ಲವೂ

**55. 'ಎಫ್‌ಡಿಆರ್' ಗಳ ಮೇಲಿನ ಬಡ್ಡಿಯನ್ನು ಚಕ್ರಬಡ್ಡಿಯಾಗಿ ___________ನೆಲೆಯಲ್ಲಿ ಲೆಕ್ಕ ಹಾಕಲಾಗುವುದು.**

ಅ. ಮಾಸಿಕ
ಆ. ಕಾಲುವಾರ್ಷಿಕ
ಇ. ಅರ್ಧವಾರ್ಷಿಕ
ಈ. ವಾರ್ಷಿಕ

**56. ಲಾಕರ್ ಒಳಗಿರುವ ವಸ್ತುಗಳ ಬಗ್ಗೆ____________**

ಅ. ಅದನ್ನು ಪಡೆದುಕೊಂಡವನಿಗೆ ಮಾತ್ರ ಗೊತ್ತಿರುತ್ತದೆ
ಆ. ಬ್ಯಾಂಕಿಗೆ ಗೊತ್ತಿರುತ್ತದೆ
ಇ. ಈ ಮೇಲಿನ ಇಬ್ಬರಿಗೂ ಗೊತ್ತಿರುತ್ತದೆ
ಈ. ಈ ಮೇಲಿನ ಯಾರಿಗೂ ಗೊತ್ತಿರುವುದಿಲ್ಲ

**57. ಲಾಕರ್ ಬಾಡಿಗೆಯನ್ನು ಪಾವತಿಸದಿದ್ದರೆ ಬ್ಯಾಂಕು ಯಾವ ಕ್ರಮ ಕೈಗೊಳ್ಳುತ್ತದೆ?**

ಅ. ಲಾಕರ್‌ನ್ನು ಸೀಲ್ ಮಾಡುತ್ತದೆ
ಆ. ಲಾಕರ್‌ನ ಚಟುವಟಿಕೆಯನ್ನು ನಿಲ್ಲಿಸುತ್ತದೆ
ಇ. ಸೂಕ್ತ ನೋಟೀಸನ್ನು ನೀಡಿದ ಅನಂತರ ಲಾಕರ್‌ನ್ನು ಒಡೆದು ತೆರೆಯುತ್ತದೆ

ಈ. ಈ ಮೇಲಿನ ಎಲ್ಲವೂ

**58. ‘ಎಂಜಿಎನ್‌ಆರ್‌ಇಜಿಎಸ್’-ಇದರ ಪೂರ್ಣ ರೂಪವೇನು?**

ಅ. ಮಹಾತ್ಮಾ ಗಾಂಧಿ ನ್ಯಾಶನಲ್ ರೂರಲ್ ಎಂಪ್ಲಾಯಿಮೆಂಟ್ ಜನರೇಷನ್ ಸ್ಕೀಂ

ಆ. ಮಹಾತ್ಮಾ ಗಾಂಧಿ ನ್ಯೂಟ್ರಿಷನ್ ಆ್ಯಂಡ್ ರೂರಲ್ ಎಂಪ್ಲಾಯಿಮೆಂಟ್ ಜನರೇಷನ್ ಸ್ಕೀಂ

ಇ. ಮಹಾತ್ಮಾ ಗಾಂಧಿ ನ್ಯಾಶನಲ್ ರೂರಲ್ ಎಂಪ್ಲಾಯಿಮೆಂಟ್ ಗ್ಯಾರಂಟಿ ಸ್ಕೀಂ

ಈ. ಈ ಮೇಲಿನ ಯಾವುದೂ ಅಲ್ಲ

**59. ನಿರಖು ಠೇವಣಿಯ ಗರಿಷ್ಠ ಕಾಲಾವಧಿಯು_________ಆಗಿರುತ್ತದೆ.**

ಅ. ಐದು ವರ್ಷ

ಆ. ಏಳು ವರ್ಷ

ಇ. ಎಂಟು ವರ್ಷ

ಈ. ಹತ್ತು ವರ್ಷ

**60. ‘ರುಪೇ ಡೆಬಿಟ್ ಕಾರ್ಡ್’ ಎಂದರೇನು?**

ಅ. ಆಂತರಿಕ ಡೆಬಿಟ್ ಕಾರ್ಡ್

ಆ. ‘ನ್ಯಾಶನಲ್ ಪೇಮೆಂಟ್ಸ್ ಕಾರ್ಪೊರೇಶನ್ ಆಫ್ ಇಂಡಿಯಾ’ದಿಂದ ಜಾರಿಗೊಂಡಂಥಾದ್ದು

ಇ. ಎಲ್ಲ ಎಟಿಎಂ ಮತ್ತು ಪಿಒಎಸ್ ಯಂತ್ರಗಳಲ್ಲಿ ಸ್ವೀಕರಿಸಲ್ಪಡುತ್ತದೆ.

ಈ. ಈ ಮೇಲಿನ ಎಲ್ಲವೂ

**61. ‘ಪಿಎಂಜೆಡಿವೈ’ ಖಾತೆಯಲ್ಲಿ ರೂ. 5,000 ಮೊತ್ತದ ಓವರ್‌ಡ್ರಾಫ್ಟ್ ಸೌಲಭ್ಯವು ಯಾರಿಗೆ ದೊರೆಯುತ್ತದೆ?**

ಅ. ಖಾತೆಯನ್ನು ಆರು ತಿಂಗಳುಗಳ ಕಾಲ ತೃಪ್ತಿಕರವಾಗಿ ಮುನ್ನಡೆಸಿದವರಿಗೆ ಆ ಅವಧಿಯ ಅನಂತರ

ಆ. ಒಂದು ಮನೆಗೆ ಒಂದು ಖಾತೆಯಂತೆ

ಇ. 18ರಿಂದ 60 ವರ್ಷ ವಯಸ್ಸಿನೊಳಗಿನ ಗ್ರಾಹಕರಿಗೆ

ಈ. ಈ ಮೇಲಿನ ಎಲ್ಲರಿಗೂ

**62. ‘ನೇರ ಲಾಭ ವರ್ಗಾವಣೆ’ ಎಂದರೇನು?**

ಅ. ಸರಕುಗಳ ಮೇಲಿನ ನಗದು ಡಿಸ್ಕೌಂಟ್

ಆ. ಬ್ಯಾಂಕುಗಳ ಮೂಲಕ ನಡೆಯುವ ಪಾವತಿ

ಇ. ಸಾಮಾಜಿಕ ಲಾಭಗಳು/ಸಬ್ಸಿಡಿಗಳ ವರ್ಗಾವಣೆ

ಈ. ಈ ಮೇಲಿನ ಯಾವುದೂ ಅಲ್ಲ

**63. ‘ಆಧಾರ್ ಸೀಡಿಂಗ್’ ಎಂದರೇನು?**

ಅ. ಆಧಾರ್‌ನ್ನು ಬ್ಯಾಂಕ್ ಖಾತೆಗೆ ಜೋಡಿಸುವುದು

ಆ. ಆಧಾರ್‌ನ ನಕಲು ಪ್ರತಿಯನ್ನು ನೀಡುವುದು

ಇ. ಆಧಾರ್‌ನ್ನು ವರ್ಗಾಯಿಸುವುದು

ಈ. ಈ ಮೇಲಿನ ಯಾವುದೂ ಅಲ್ಲ

**64. ‘ಪಿಎಂಜೆಡಿವೈ’ಗೆ ಲಗತ್ತೀಕರಿಸಲಾದ ಲಾಭಗಳೇನು?**

ಅ. ರೂ. ಒಂದು ಲಕ್ಷ ಮೊತ್ತದ ಅಪಘಾತ ವಿಮೆ

ಆ. ರೂ. ಮೂವತ್ತು ಸಾವಿರದ ಜೀವ ವಿಮೆ

ಇ. ರೂ. ಐದು ಸಾವಿರದ ಓವರ್‌ಡ್ರಾಫ್ಟ್ ಸೌಲಭ್ಯ

ಈ. ಈ ಮೇಲಿನ ಎಲ್ಲವೂ

**65. ‘ಪಿಎಂಜೆಡಿವೈ’ ಯಡಿಯಲ್ಲಿ ಯಾರು ಖಾತೆಯೊಂದನ್ನು ತೆರೆಯಬಹುದು?**

ಅ. ಹತ್ತು ವರ್ಷಕ್ಕಿಂತಲೂ ಮೇಲಿನ ವಯಸ್ಸಿನ ಅಪ್ರಾಪ್ತ

ಆ. ಮನೆಯ ಒಬ್ಬಳು ಮಹಿಳೆ ಮಾತ್ರ

ಇ. ಕುಟುಂಬದ ಮುಖ್ಯಸ್ಥ ಮಾತ್ರ

ಈ. ಈ ಮೇಲಿನ ಎಲ್ಲರೂ

**66. 'ಬ್ಯಾಂಕ್ ಮಿತ್ರ' ಎಂದು ಯಾರನ್ನು ಕರೆಯುತ್ತಾರೆ?**

ಅ. ಬ್ಯಾಂಕುಗಳು ನೇಮಿಸುವ ಬ್ಯಾಂಕಿಂಗ್ ಕರೆಸ್ಪೋಂಡೆಂಟ್‌ಗಳು

ಆ. ಬ್ಯಾಂಕಿನ ಅಮೂಲ್ಯ ಗ್ರಾಹಕರು

ಇ. ಶಾಖೆಯೊಂದರ ಸೆಕ್ಯುರಿಟಿ ಗಾರ್ಡ್

ಈ. ಈ ಮೇಲಿನ ಯಾರೂ ಅಲ್ಲ

**67. ಸಣ್ಣ ಖಾತೆಗಳಲ್ಲಿ ಅನುಮತಿಸಲ್ಪಟ್ಟ ಠೇವಣಿಗಳ ಗರಿಷ್ಠ ಮೊತ್ತವೆಷ್ಟು?**

ಅ. ರೂ. 30,000

ಆ. ರೂ. 40,000

ಇ. ರೂ. 50,000

ಈ. ಈ ಮೇಲಿನ ಯಾವುದೂ ಅಲ್ಲ

**68. 'ಮೂಲ ಉಳಿತಾಯ ಬ್ಯಾಂಕ್ ಠೇವಣಿ ಖಾತೆ' ಯಲ್ಲಿ ಉಚಿತವಾಗಿ ಲಭ್ಯವಿರುವ ಸೇವೆಗಳು ಯಾವುವು?**

ಅ. ಎನ್‌ಎಫ್‌ಟಿ/ಆರ್‌ಟಿಜಿಎಸ್ ಮುಖಾಂತರ ಹಣವನ್ನು ಸ್ವೀಕರಿಸುವುದು/ಕಳುಹಿಸುವುದು

ಆ. ಎಟಿಎಂ ಯಾನೆ ಡೆಬಿಟ್ ಕಾರ್ಡ್‌ನ ಮೇಲೆ ವಾರ್ಷಿಕ ನಿರ್ವಹಣಾ ವೆಚ್ಚಗಳಿರುವುದಿಲ್ಲ

ಇ. ಮಾಸಿಕ ನಾಲ್ಕು ಬಾರಿ ಹಣ ಹಿಂದೆಗೆಯುವ ಅವಕಾಶಗಳು( ಎಟಿಎಂ ನಿಂದ ಹಣ ತೆಗೆಯುವುದೂ ಸೇರಿ)

ಈ. ಈ ಮೇಲಿನ ಎಲ್ಲವೂ

**69. 'ಬಿಎಸ್‌ಬಿಡಿ' ಖಾತೆಯೊಂದನ್ನು ತೆರೆಯುವಾಗ ಅವಶ್ಯವಿರುವ ಕನಿಷ್ಠ ಠೇವಣಿ ಎಷ್ಟು?**

ಅ. ರೂ. ಒಂದು ನೂರು

ಆ. ಯಾವುದೇ ಕನಿಷ್ಠ ಠೇವಣಿಯ ಅವಶ್ಯಕತೆಯಿರುವುದಿಲ್ಲ

ಇ. ರೂ. ಒಂದು ಸಾವಿರ

ಈ. ರೂ. ಐನೂರು

**70. 'ಅಟಲ್ ಪಿಂಚಣಿ ಯೋಜನೆ'(ಎಪಿವೈ) ಎಂದರೇನು?**

ಅ. ಅಸಂಘಟಿತ ವಲಯಕ್ಕೆ ಸಾಮಾಜಿಕ ಭದ್ರತೆಯನ್ನು ಒದಗಿಸುತ್ತದೆ

ಆ. ತಮ್ಮ ನಿವೃತ್ತಿ ಜೀವನಕ್ಕಾಗಿ ಸ್ವಯಂ ಇಚ್ಛೆಯಿಂದ ಉಳಿತಾಯ ಮಾಡಲು ದುಡಿಮೆದಾರರಿಗೆ ಪ್ರೋತ್ಸಾಹ ನೀಡುತ್ತದೆ

ಇ. ಅರುವತ್ತರ ವಯಸ್ಸಿಗೆ ಬಂದಾಗ ನಿರ್ದಿಷ್ಟ ನಿಗದಿತ ಪಿಂಚಣಿಯನ್ನು ನೀಡಲಾಗುತ್ತದೆ

ಈ. ಈ ಮೇಲಿನ ಎಲ್ಲವೂ

**71. 'ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ'( ಪಿಎಂಎಸ್‌ಬಿವೈ) ಎಂದರೇನು?**

ಅ. ಅಪಘಾತ ವಿಮಾ ಸೌಲಭ್ಯ

ಆ. ಜೀವ ವಿಮಾ ಸೌಲಭ್ಯ

ಇ. ರೂ. 5,000 ದವರೆಗಿನ ಓವರ್‌ಡ್ರಾಫ್ಟ್

ಈ. ಈ ಮೇಲಿನ ಯಾವುದೂ ಅಲ್ಲ

**72. 'ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆ'( ಪಿಎಂಜೆಜೆಬಿವೈ) ಎಂದರೇನು?**

ಅ. ರೂ. ಎರಡು ಲಕ್ಷದವರೆಗಿನ ಜೀವ ವಿಮಾ ಸೌಲಭ್ಯ

ಆ. ಅಪಘಾತ ವಿಮಾ ಸೌಲಭ್ಯ

ಇ. ಈ ಮೇಲಿನ ಎರಡೂ

ಈ. ಈ ಮೇಲಿನ ಯಾವುದೂ ಅಲ್ಲ

**73. ಯಾವ ಸ್ವರೂಪದ ಠೇವಣಿಯು ಅಧಿಕ ಬಡ್ಡಿ ದರವನ್ನು ಹೊಂದಿದೆ?**

ಅ. ಚಾಲ್ತಿ ಖಾತೆ

ಆ. ಉಳಿತಾಯ ಖಾತೆ

ಇ. ನಿರಖು ಠೇವಣಿ

ಈ. ಈ ಮೇಲಿನ ಯಾವುದೂ ಅಲ್ಲ

**74. 'ಪಿಎಂಎಸ್‌ಬಿವೈ'ಯಡಿಯಲ್ಲಿ__________ಮೊತ್ತದ ಹಣವು ಅಪಘಾತದಿಂದಾಗುವ ಸಾವಿಗೆ ದೊರೆಯುತ್ತದೆ.**

ಅ. ರೂ. ಒಂದು ಲಕ್ಷ
ಆ. ರೂ. ಎರಡು ಲಕ್ಷ
ಇ. ರೂ. ಮೂರು ಲಕ್ಷ
ಈ. ಈ ಮೇಲಿನ ಯಾವುದೂ ಅಲ್ಲ

**75. ಚೆಕ್ ಒಂದರ ಸಿಂಧುತ್ವ ಅವಧಿ ಏನು?**
ಅ. ನೀಡಿಕೆಯ ದಿನಾಂಕದಿಂದ ನಾಲ್ಕು ತಿಂಗಳು
ಆ. ನೀಡಿಕೆಯ ದಿನಾಂಕದಿಂದ ಮೂರು ತಿಂಗಳು
ಇ. ನೀಡಿಕೆಯ ದಿನಾಂಕದಿಂದ ಒಂದು ತಿಂಗಳು
ಈ. ಅನಿಯಮಿತ

**76. 'ಪಿಎಂಎಸ್‌ಬಿವೈ'ಯಡಿಯಲ್ಲಿ ಆಂಶಿಕ ಅಂಗವೈಕಲ್ಯಕ್ಕೆ ದೊರೆಯುವ ಪರಿಹಾರ ಮೊತ್ತ ಯಾವುದು?**
ಅ. ರೂ. ಐವತ್ತು ಸಾವಿರ
ಆ. ರೂ. ಒಂದು ಲಕ್ಷ
ಇ. ರೂ. ಎರಡು ಲಕ್ಷ
ಈ. ಈ ಮೇಲಿನ ಯಾವುದೂ ಅಲ್ಲ

**77. ಅನಕ್ಷರಸ್ಥ ವ್ಯಕ್ತಿಗೆ ಡೆಬಿಟ್ ಕಾರ್ಡ್ ಕೊಡಬಹುದೇ?**
ಅ. ಇಲ್ಲ
ಆ. ಹೌದು
ಇ. ಜಂಟಿ ಖಾತೆ ಹೊಂದಿದ್ದರೆ ಮಾತ್ರ
ಈ. ಸಂಬಂಧಿಸಿದ ವ್ಯಕ್ತಿಯು ಕುಟುಂಬದ ಮುಖ್ಯಸ್ಥನಾಗಿದ್ದರೆ ಮಾತ್ರ

**78. 'ಎಪಿವೈ' ಯಡಿಯಲ್ಲಿ ಪಡೆಯಬಹುದಾದ ನಿಗದಿತ ಪಿಂಚಣಿಯನ್ನು ಯಾವುದರಿಂದ ಆರಿಸಬಹುದು?**
ಅ. ರೂ. 1,000, ರೂ. 2,000, ರೂ. 3,000, ರೂ. 4,000, ರೂ. 5,000
ಆ. ರೂ. 2,000, ರೂ. 3,000, ರೂ. 4,000, ರೂ. 5,000, ರೂ. 6,000
ಇ. ರೂ. 500, ರೂ. 1,000, ರೂ. 2,000, ರೂ.3,000, ರೂ. 4,000
ಈ. ಈ ಮೇಲಿನ ಯಾವುದೂ ಅಲ್ಲ

**79. 'ಪಿಎಂಜೆಡಿವೈ'ಯಡಿಯಲ್ಲಿ ರೂ. 30,000 ಮೊತ್ತದ ಜೀವ ವಿಮೆಯು ಯಾವಾಗ ತೆರೆಯಲಾದ ಪ್ರಪ್ರಥಮ ಖಾತೆಗೆ ದೊರೆಯುತ್ತದೆ?**
ಅ. 15 ಅಗೋಸ್ತು, 2014
ಆ. 26 ಜನವರಿ, 2015
ಇ. 15 ಅಗೋಸ್ತು 2014 ಮತ್ತು 26 ಜನವರಿ, 2015ರ ನಡುವೆ
ಈ. ಈ ಮೇಲಿನ ಯಾವುದೂ ಅಲ್ಲ

**80. ರೂ. 30,000 ಮೊತ್ತದ 'ಪಿಎಂಜೆಡಿವೈ' ಜೀವ ವಿಮಾ ಯೋಜನೆಯಡಿಯಲ್ಲಿ ಬಾರದಿರುವವರು ಯಾರು?**
ಅ. ಕೇಂದ್ರ/ರಾಜ್ಯ ಸರಕಾರದ /ಸಾರ್ವಜನಿಕ ಕ್ಷೇತ್ರದ ಸಂಸ್ಥೆಗಳ/ಬ್ಯಾಂಕುಗಳ ಉದ್ಯೋಗಿಗಳು
ಆ. ಆದಾಯ ತೆರಿಗೆ ಪಾವತಿದಾರರು
ಇ. ಆಮ್ ಆದ್ಮಿ ಬಿಮಾ ಯೋಜನೆಯ ಫಲಾನುಭವಿಗಳು
ಈ. ಈ ಮೇಲಿನ ಎಲ್ಲರೂ

******************

# ಉತ್ತರಗಳು

1. ಈ
2. ಇ
3. ಆ
4. ಇ
5. ಇ
6. ಈ
7. ಈ
8. ಇ
9. ಅ
10. ಆ
11. ಈ
12. ಅ
13. ಈ
14. ಇ
15. ಈ
16. ಅ
17. ಅ
18. ಈ
19. ಇ
20. ಇ
21. ಈ
22. ಇ
23. ಇ
24. ಇ
25. ಇ
26. ಅ
27. ಈ
28. ಈ
29. ಇ
30. ಇ
31. ಅ
32. ಅ
33. ಈ
34. ಅ
35. ಆ
36. ಈ
37. ಅ
38. ಅ
39. ಆ
40. ಈ
41. ಇ
42. ಇ
43. ಆ
44. ಈ
45. ಈ
46. ಇ
47. ಇ
48. ಈ
49. ಈ
50. ಇ
51. ಇ
52. ಈ
53. ಈ
54. ಇ
55. ಆ
56. ಅ
57. ಈ
58. ಇ
59. ಈ
60. ಈ
61. ಈ
62. ಇ
63. ಅ
64. ಈ
65. ಈ
66. ಅ
67. ಇ
68. ಈ
69. ಆ
70. ಈ
71. ಅ
72. ಅ
73. ಇ
74. ಆ
75. ಆ
76. ಆ
77. ಆ
78. ಅ
79. ಇ
80. ಈ

****************************

# ಪಿಎಂಎಂವೈಯಡಿಯಲ್ಲಿ ಮುದ್ರಾ ಸಾಲಗಳ ಮೇಲೆ ಬಹು ಆಯ್ಕೆ ಪ್ರಶ್ನೆಗಳು

**ಪ್ರಶ್ನೆ 1: 'ಪಿಎಂಎಂವೈ' ಎಂದರೆ ಏನು?**

ಅ) ಪ್ರಧಾನ ಮಂತ್ರಿ ಮನಿ ಯೋಜನಾ

ಆ) ಪ್ರಧಾನ ಮಂತ್ರಿ ಮುದ್ರಾ ಯೋಜನಾ

ಇ) ಪ್ರೈಮರಿ ಮನಿ ಮಾರ್ಕೆಟ್ ಯೋಜನಾ

**ಪ್ರಶ್ನೆ 2: 'ಪಿಎಂಎಂವೈ'ಯಡಿಯಲ್ಲಿ ಲಭ್ಯವಿರುವ ಗರಿಷ್ಠ ಸಾಲದ ಮೊತ್ತವೆಷ್ಟು?**

ಅ) ಐದು ಲಕ್ಷ

ಆ) ಹತ್ತು ಲಕ್ಷ

ಇ) ಐವತ್ತು ಲಕ್ಷ

**ಪ್ರಶ್ನೆ 3: 'ಶಿಶು' ಪ್ರವರ್ಗದಡಿಯಲ್ಲಿ ಎಷ್ಟು ಸಾಲವನ್ನು ಪಡೆದುಕೊಳ್ಳಬಹುದು?**

ಅ) ರೂ. 10,000

ಆ) ರೂ. 50,000

ಇ) ರೂ. ಒಂದು ಲಕ್ಷ

**ಪ್ರಶ್ನೆ 4: ಯಾವ ಪ್ರವರ್ಗದಲ್ಲಿ ಐದು ಲಕ್ಷ ಮೊತ್ತದ ಸಾಲವು ಲಭ್ಯವಿರುತ್ತದೆ?**

ಅ) ಶಿಶು

ಆ) ಕಿಶೋರ್

ಇ) ತರುಣ್

**ಪ್ರಶ್ನೆ 5: ಈ ಕೆಳಗಿನ ಯಾವ ಉದ್ದೇಶಿತ ಚಟುವಟಿಕೆಯನ್ನು ನಡೆಸಲು ಮುದ್ರಾ ಸಾಲವನ್ನು ಪಡೆದುಕೊಳ್ಳಬಹುದು?**

ಅ) ಉತ್ಪಾದನೆ, ಸಂಸ್ಕರಣೆ, ವ್ಯಾಪಾರ, ಸೇವೆಗಳು

ಆ) ವೈಯಕ್ತಿಕ ಸಾಲ

ಇ) ಪ್ರೈಮರಿ ಮತ್ತು ಸೆಕೆಂಡರಿ ಮಾರುಕಟ್ಟೆಯಲ್ಲಿ ಷೇರುಗಳು, ಸರಕುಗಳ ಮೇಲೆ ಹೂಡಿಕೆ

**ಪ್ರಶ್ನೆ 6: ಯಾವ ಉದ್ದೇಶಕ್ಕಾಗಿ 'ಪಿಎಂಎಂವೈ' ಸಾಲವನ್ನು ನೀಡಲಾಗುತ್ತದೆ?**

ಅ) ಆದಾಯವನ್ನು ಹುಟ್ಟುಹಾಕುವ ಉದ್ದೇಶ

ಆ) ಬಳಕೆಯ ಉದ್ದೇಶ

ಇ) ಈ ಮೇಲಿನ ಎರಡೂ

**ಪ್ರಶ್ನೆ 7: 'ಪಿಎಂಎಂವೈ' ಯಡಿಯಲ್ಲಿ ಎಂಎಸ್ಇ ಗೋಸ್ಕರ ಸಾಲ ಪಡೆಯಲು ಬ್ಯಾಂಕುಗಳಲ್ಲಿ ಇರಿಸಬೇಕಾದ ಪಾರ್ಶ್ವಿಕ/ಭದ್ರತೆಗಳು ಏನು?**

ಅ) ಚರ ಅಥವಾ ಸ್ಥಿರ ಆಸ್ತಿಗಳ ಅಡಮಾನು

ಆ) ಮೂರನೆಯ ವ್ಯಕ್ತಿಯ ಭರವಸೆ

ಇ) ಏನೂ ಇಲ್ಲ

**ಪ್ರಶ್ನೆ 8: 'ಪಿಎಂಎಂವೈ' ಸಾಲವನ್ನು ಯಾರು ಪಡೆಯಬಹುದು?**

ಅ) ಯಾವನೇ ಭಾರತೀಯ ಪ್ರಜೆ

ಆ) ಯಾವುದೇ ಘಟಕ, ಕಾರ್ಪೊರೇಟ್ ಸಂಸ್ಥೆ, ಕಂಪೆನಿ, ಅಥವಾ ಭಾರತದೊಂದಿಗೆ ಒಡಂಬಡಿಕೆ ಮಾಡಿಕೊಂಡ ಯಾವುದೇ ಇತರ ಸಂಸ್ಥೆ

ಇ) ಈ ಮೇಲಿನ ಎರಡೂ

**ಪ್ರಶ್ನೆ 9: 'ಪಿಎಂಎಂವೈ' ಸಾಲವನ್ನು ಎಲ್ಲಿಂದ ಪಡೆಯಬಹುದು?**

ಅ) ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳು, ಖಾಸಗಿ ಕ್ಷೇತ್ರದ ಬ್ಯಾಂಕುಗಳು, ವಿದೇಶೀ ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳು

ಆರ್‌ಆರ್‌ಬಿಗಳು, ಎನ್‌ಬಿಎಫ್‌ಸಿಗಳು ಮತ್ತು ಎಂಎಫ್‌ಐಗಳು

ಆ) ಮುದ್ರಾದಿಂದ ನೇರವಾಗಿ

ಇ) ಈ ಮೇಲಿನ ಎರಡೂ

**ಪ್ರಶ್ನೆ 10: 'ಪಿಎಂಎಂವೈ' ಸಾಲ ಪಡೆಯಲು ಗ್ರಾಹಕರಿಗೆ ಬ್ಯಾಂಕಿನೊಂದಿಗಿರಬೇಕಾದ ಸಂಬಂಧವೇನು?**

ಅ) ಗ್ರಾಹಕರಿಗೆ ಬ್ಯಾಂಕಿನೊಂದಿಗೆ ಬ್ಯಾಂಕಿಂಗ್ ವ್ಯವಹಾರದ ಸಂಬಂಧವಿರುತ್ತದೆ

ಆ) ಗ್ರಾಹಕರಿಗೆ ಬ್ಯಾಂಕಿನೊಂದಿಗೆ ಇದಕ್ಕೂ ಮುಂಚೆ ಯಾವುದೇ(ಉಳಿತಾಯ/ಚಾಲ್ತಿ ಖಾತೆ)ವ್ಯಾವಹಾರಿಕ ಸಂಬಂಧವಿರುವುದಿಲ್ಲ

ಇ) ಈ ಮೇಲಿನ ಎರಡೂ

**ಪ್ರಶ್ನೆ 11: 'ಪಿಎಂಎಂವೈ' ಸಾಲಗಳಡಿಯಲ್ಲಿ ಮುದ್ರಾದ ಪಾತ್ರವೇನು?**

ಅ)ಮುದ್ರಾವು ನೇರ ಸಾಲ ನೀಡುವ ಸಂಸ್ಥೆಯಾಗಿದ್ದು ಅದು ಸಣ್ಣ/ಅತಿ ಸಣ್ಣ ಘಟಕಗಳಿಗೆ/ಉದ್ಯಮಿಗಳಿಗೆ ಪಿಎಂಎಂವೈಗಾಗಿ ನೇರ ಸಾಲವನ್ನು ನೀಡುತ್ತದೆ.

ಆ) ಅದು ಮರು ಹಣಕಾಸು ನೆರವು ನೀಡುವ ಏಜೆನ್ಸಿಯಾಗಿ ಕೆಲಸ ಮಾಡುತ್ತದೆ. ಅದು ಗ್ರಾಹಕರ ಅವಶ್ಯಕತೆಗಳಿಗನುಸಾರವಾಗಿ ಪಿಎಂಎಂವೈ ಸಾಲಗಳ ವಿಭಿನ್ನ ಪ್ರವರ್ಗಗಳಡಿಯಲ್ಲಿ ಆರ್ಥಿಕ ಸಹಕಾರ ನೀಡುವುದಕ್ಕಾಗಿ ಮರು ಹಣಕಾಸು ನೆರವನ್ನು ಎಲ್ಲ ಬ್ಯಾಂಕುಗಳು, ಎನ್‌ಬಿಎಫ್‌ಸಿಗಳು ಹಾಗೂ ಎಂಎಫ್‌ಐಗಳಿಗೆ ನೀಡುತ್ತದೆ.

ಇ) ಮುದ್ರಾ ಬ್ಯಾಂಕುಗಳ ನಿಯಂತ್ರಕವಾಗಿರುತ್ತದೆ

**ಪ್ರಶ್ನೆ 12: ಸಾಲ ಪಡೆದುಕೊಳ್ಳುವವರು ಸಮಸ್ಯೆರಹಿತವಾಗಿ ಮತ್ತು ತುಂಬ ಆರಾಮವಾಗಿ ಸಾಲ ಪಡೆಯಲು ನೆರವಾಗುವ ಮುದ್ರಾ ಕಾರ್ಡ್‌ನ ಲಕ್ಷಣಗಳೇನು?**

ಅ) ಮಂಜೂರಾದ ಮಿತಿಯೊಳಗಿನ ಡೆಬಿಟ್ ಕಾರ್ಡ್

ಆ) ಕ್ರೆಡಿಟ್ ಕಾರ್ಡ್

ಇ) ಸಾಮಾನ್ಯ ಡೆಬಿಟ್ ಕಾರ್ಡ್

**ಪ್ರಶ್ನೆ 13: ಮುದ್ರಾ ಕಾರ್ಡ್ ಎನ್ನುವುದು ಯಾವ ಸ್ವರೂಪದ ಪಾವತಿಯ ಡೆಬಿಟ್ ಕಾರ್ಡ್ ಆಗಿದೆ?**

ಅ) ರುಪೇ

ಆ) ವೀಸಾ

ಇ) ಮಾಸ್ಟರ್ ಕಾರ್ಡ್

**ಪ್ರಶ್ನೆ 14: ಮುದ್ರಾ ಕಾರ್ಡ್ ನ ಉಪಯೋಗವೇನು? ಅದನ್ನು ಹೇಗೆ ಉಪಯೋಗಿಸಬಹುದು?**

ಅ) ಎಟಿಎಂ ಅಥವಾ ಬಿಸಿನೆಸ್ ಕರೆಸ್ಪೋಂಡೆಂಟ್‌ನಿಂದ ನಗದನ್ನು ತೆಗೆಯಲು

ಆ) 'ಪಾಯಿಂಟ್ ಆಫ್ ಸೇಲ್'(ಪಿಒಎಸ್) ಯಂತ್ರವನ್ನು ಬಳಸಿ ಖರೀದಿ ನಡೆಸಲು

ಇ) ಈ ಮೇಲಿನ ಎರಡೂ

**ಪ್ರಶ್ನೆ 15: ಗ್ರಾಹಕರಿಗೆ ಮುದ್ರಾ ಕಾರ್ಡನ್ನು ಯಾರು ನೀಡುತ್ತಾರೆ?**

ಅ) ಬ್ಯಾಂಕುಗಳು–ನೇರವಾಗಿ ಅಥವಾ ಎಂಎಫ್‌ಐ ಜೊತೆ ಸೇರಿಕೊಂಡು

ಆ) ಎಂಎಫ್‌ಐ ಗಳು– ನೇರವಾಗಿ

ಇ) ಮುದ್ರಾ

**ಪ್ರಶ್ನೆ 16: 'ಪಿಎಂಎಂವೈ' ಸಾಲಗಳು ಯಾರಿಗೆ ಅನ್ವಯವಾಗುತ್ತವೆ?**

ಅ) ಭಾರತದಾದ್ಯಂತದ ಎಲ್ಲ ಬ್ಯಾಂಕುಗಳಿಗೆ

ಆ) ಭಾರತದಲ್ಲಿ ಅಧಿಸೂಚಿತ ಸ್ಥಳಗಳು/ಪ್ರದೇಶಗಳ ವ್ಯಾಪ್ತಿಯೊಳಗೆ

ಇ) ಭಾರತದಾದ್ಯಂತದ ಹಾಗೂ ವಿದೇಶದ ಎಲ್ಲ ಬ್ಯಾಂಕುಗಳಿಗೆ

**ಪ್ರಶ್ನೆ 17: ಸಾಲ ಪಡೆಯುವವರಿಗೆ ಬ್ಯಾಂಕುಗಳು, ಎನ್‌ಬಿಎಫ್‌ಸಿಗಳು, ಎಂಎಫ್‌ಐಗಳು ನೀಡುವ 'ಪಿಎಂಎಂವೈ' ಸಾಲಗಳ ಬಡ್ಡಿ ದರವೇನು?**

ಅ) ಸಮಗ್ರ ಆರ್‌ಬಿಐ ಮಾರ್ಗಸೂಚಿಗಳ ಪರಿಧಿಯೊಳಗೆ ಇರುವಂತೆ ನೋಡಿಕೊಂಡು ಬ್ಯಾಂಕುಗಳು, ಎನ್‌ಬಿಎಫ್‌ಸಿಗಳು, ಎಂಎಫ್‌ಐಗಳು ನಿರ್ಧರಿಸುವ ವಿವೇಚನಾತ್ಮಕ ದರಗಳು

ಆ) ಮುದ್ರಾ ನಿಗದಿಪಡಿಸುವ ದರಗಳು

ಇ) ಆರ್‌ಬಿಐ ನಿರ್ಧರಿಸುವ ಏಕರೂಪದ ದರಗಳು

**ಪ್ರಶ್ನೆ 18: ಎಷ್ಟು ಅವಧಿಗೆ 'ಪಿಎಂಎಂವೈ' ಸಾಲಗಳನ್ನು ನೀಡಲಾಗುತ್ತದೆ?**

ಅ) ಒಂದು ವರ್ಷ

ಆ) ಎರಡು ವರ್ಷ

ಇ) ಉದ್ದಿಮೆಯ ನಗದು ಹರಿವನ್ನು ಅವಲಂಬಿಸಿದೆ ಹಾಗೂ ಸಾಲ ನೀಡುವ ಸಂಸ್ಥೆ ನಿರ್ಣಯಿಸುತ್ತದೆ

**ಪ್ರಶ್ನೆ 19: ಸಾಲವನ್ನು ಮಂಜೂರು ಮಾಡದಿದ್ದರೆ ಅಂತಹ ಬ್ಯಾಂಕ್ ಅಧಿಕಾರಿಗಳ ವಿರುದ್ಧ 'ದೂರು ನಿರ್ಣಯ ವ್ಯವಸ್ಥೆ' ಏನಿದೆ?**

ಅ) ಬ್ಯಾಂಕಿನ ಮುಂದಿನ ಉನ್ನತ ಕಚೇರಿ(ಪ್ರಾದೇಶಿಕ/ವಲಯ ಮಟ್ಟದ)ಗೆ ವಿಚಾರವನ್ನು ಕೊಂಡೊಯ್ಯುವುದು

ಆ) ಗ್ರಾಹಕರು ದೂರನ್ನು ಬ್ಯಾಂಕುಗಳ ನೋಡಲ್ ಅಧಿಕಾರಿಗಳಲ್ಲಿ–ಪಿಎಂಎಂವೈ ಅಥವಾ ಪಿಎಂಎಂವೈ ಮಿಷನ್ ಕಚೇರಿ ಅಥವಾ ಪಿಎಂಎಂವೈ ಟೋಲ್ ಫ್ರೀ–ದಾಖಲಿಸಬಹುದು

ಇ) ಈ ಮೇಲಿನ ಎರಡೂ

**ಪ್ರಶ್ನೆ 20: ಮುದ್ರಾದ ಅಡಿಯಲ್ಲಿ ಸಾಲ ಪಡೆದುಕೊಳ್ಳಲು ನೀಡಬೇಕಾದ ದಾಖಲೆಪತ್ರಗಳೇನು?**

ಅ) ಸಾಲದ ಸ್ಟ್ಯಾಂಡರ್ಡ್ ಅರ್ಜಿ ನಮೂನೆ

ಆ) ಕೆವೈಸಿ, ಮತ್ತು ಸಾಲ ನೀಡುವ ಬ್ಯಾಂಕು/ಎನ್‌ಬಿಎಫ್‌ಸಿ/ಎಂಎಫ್‌ಐಗಳ ಆಂತರಿಕ ಮಾರ್ಗದರ್ಶನಗಳ ಪ್ರಕಾರ ಅಗತ್ಯವಿರುವ ದಾಖಲೆಪತ್ರಗಳು

ಇ) ಈ ಮೇಲಿನ ಎರಡೂ

**ಪ್ರಶ್ನೆ 21: ರಾಷ್ಟ್ರ ಮಟ್ಟದಲ್ಲಿ 'ಪಿಎಂಎಂವೈ' ಜಾರಿಯ ಪ್ರಗತಿಯ ಮೇಲೆ ಯಾರು ಕಣ್ಗಾಪು ಇಡುತ್ತಾರೆ?**

ಅ) ಮುದ್ರಾ/ಆರ್ಥಿಕ ಸೇವೆಗಳ ಇಲಾಖೆ

ಆ) ಸ್ಟೇಟ್ ಲೆವೆಲ್ ಬ್ಯಾಂಕರ್ಸ್ ಕಮಿಟಿ( ಎಸ್‌ಎಲ್‌ಬಿಸಿ)

ಇ) ಈ ಮೇಲಿನ ಎರಡೂ

**ಪ್ರಶ್ನೆ 22: ಸಾಲ ನೀಡುವ ಸಂಸ್ಥೆಗಳು/ಸಾರ್ವಜನಿಕರ ಬಗ್ಗೆ ಮಾಹಿತಿ ಪಡೆಯಲು ಪಿಎಂಎಂವೈ ಸಾಲಗಳ ಮೇಲೆ 'ಆಗೀಗ ಕೇಳಲಾಗುವ ಪ್ರಶ್ನೆಗಳು'(ಈಡಿಜಡಣಜಟಿಣಟಥಿ ೂಞಜಜ ಕಿಣಾಭಿಣಖಂಟಿ–ಈಂಕಿ) ಎಲ್ಲಿ ದೊರೆಯುತ್ತವೆ?**

ಅ) ಡಿಎಫ್‌ಎಸ್ ವೆಬ್‌ಸೈಟ್

ಆ) ಪಿಎಂಒ ವೆಬ್‌ಸೈಟ್

ಇ) ಮುದ್ರಾ ವೆಬ್‌ಸೈಟ್

**ಪ್ರಶ್ನೆ 23: ಅತಿ ಸಣ್ಣ/ಸಣ್ಣ ಉದ್ದಿಮೆಗಳನ್ನು ನಡೆಸಲು/ಸ್ಥಾಪಿಸಲು ಅಗತ್ಯವಿರುವ ಸ್ಯಾಂಪಲ್ ಪ್ರೊಜೆಕ್ಟ್ ವಿವರಗಳು ಎಲ್ಲಿ ಲಭ್ಯವಿರುತ್ತವೆ?**

ಅ) ಡಿಎಫ್‌ಎಸ್ ವೆಬ್‌ಸೈಟ್

ಆ) ಮುದ್ರಾ ವೆಬ್‌ಸೈಟ್

ಇ) ಪಿಎಂಒ ವೆಬ್‌ಸೈಟ್

**ಪ್ರಶ್ನೆ 24: ಮುದ್ರಾ ವನ್ನು ಯಾರು ಸ್ಥಾಪಿಸಿದರು?**

ಅ) ಭಾರತ ಸರಕಾರ

ಆ) ಆರ್‌ಬಿಐ

ಇ) ಸೆಬಿ

**ಪ್ರಶ್ನೆ 25: ______________ರಂದು ಅಥವಾ ಅನಂತರ ಬ್ಯಾಂಕುಗಳು/ಎನ್‌ಬಿಎಫ್‌ಸಿಗಳು/ಎಂಎಫ್‌ಐಗಳು ಆದಾಯ ತರುವ ಸಣ್ಣ ಉದ್ಯಮ ಚಟುವಟಿಕೆಗಳಿಗಾಗಿ ಮಂಜೂರು ಮಾಡಿದ ರೂ. 10 ಲಕ್ಷದವರೆಗಿನ ಸಾಲಗಳನ್ನು ಪಿಎಂಎಂವೈ ಸಾಲಗಳೆನ್ನುತ್ತಾರೆ.**

ಅ) ಮಾರ್ಚ್ 18, 2015

ಆ) ಏಪ್ರಿಲ್ 08, 2015

ಇ) ಮೇ 20, 2015

**ಪ್ರಶ್ನೆ 26: 'ಪಿಎಂಜೆಡಿವೈ'ಯಡಿಯಲ್ಲಿ ಮಂಜೂರಾದ, 'ಪಿಎಂಎಂವೈ'ಯಡಿಯಲ್ಲಿ ಮುದ್ರಾ ಸಾಲಗಳೆಂದು ವರ್ಗೀಕರಿಸಲ್ಪಟ್ಟ, ಓವರ್ ಡ್ರಾಫ್ಟ್‌ನ ಮೊತ್ತವೆಷ್ಟು?**

ಅ) ರೂ. 5,000

ಆ) ರೂ. 10,000

ಇ) ರೂ. 15,000

**ಪ್ರಶ್ನೆ 27: ಸಾಲ ಪಡೆಯುವ ಈ ಕೆಳಗಿನವರಲ್ಲಿ 'ಪಿಎಂಎಂವೈ'ಯಡಿಯಲ್ಲಿಮುದ್ರಾ ಸಾಲಗಳನ್ನು ಪಡೆಯಲು ಯಾರು ಅರ್ಹರಾಗಿದ್ದಾರೆ?**

ಅ) ಬೃಹತ್ ಕಾರ್ಪೊರೇಟ್‌ಗಳು

ಆ) ಮುನಿಸಿಪಲ್ ಕಾರ್ಪೊರೇಷನ್‌ಗಳು

ಇ) ಸಣ್ಣ ಹಣ್ಣುಹಂಪಲು ಮಾರಾಟಗಾರರು, ತರಕಾರಿ ವ್ಯಾಪಾರಿಗಳು

**ಪ್ರಶ್ನೆ 28: ಬ್ಯಾಂಕುಗಳು/ಎನ್‌ಬಿಎಫ್‌ಸಿಗಳು/ಎಂಎಫೈಗಳು ಹಾಗೂ ಸಾರ್ವಜನಿಕರ ಬಗ್ಗೆ ಮಾಹಿತಿಗಾಗಿ 'ಪಿಎಂಎಂವೈ'ಯಡಿಯಲ್ಲಿ ಮಂಜೂರಾದ/ವಿತರಿಸಲ್ಪಟ್ಟ ಒಟ್ಟು ಸಾಲಗಳ ವಿವರಗಳು________________ನಲ್ಲಿ ದೊರೆಯುತ್ತವೆ.**

ಅ) ಡಿಎಫ್‌ಎಸ್ ವೆಬ್‌ಸೈಟ್

ಆ) ಮುದ್ರಾ ಪೋರ್ಟಲ್

ಇ) ಪಿಎಂಒ ವೆಬ್‌ಸೈಟ್

**ಪ್ರಶ್ನೆ 29: ಡಿಎಫ್‌ಎಸ್, ರೇಟಿಂಗ್ ಏಜೆನ್ಸಿಗಳು, ಎಂಎಫ್‌ಐಎನ್ ಮತ್ತು ಸ-ಧನ್ ಹಾಗೂ ಇತರ ಆಸಕ್ತಿದಾರರ ಜೊತೆಯಲ್ಲಿ ಚರ್ಚಿಸಿದ ಮೇಲೆ ಮುದ್ರಾ ದಿಂದ ಅಂತಿಮ ರೂಪ ಪಡೆಯುವ ಹಾಗೂ ಸಾಲ ನೀಡುವ ಎಲ್ಲ ಸಂಸ್ಥೆಗಳು ಅಳವಡಿಸಿಕೊಳ್ಳುವ ಎಲ್ಲ ಪಿಎಂಎಂವೈ ಸಾಲಗಳನ್ನು ______________ನಿರ್ವಹಿಸಿ ನೋಡಿಕೊಳ್ಳುತ್ತದೆ.**

ಅ) ಮುದ್ರಾ ಸಾಲ ನೀಡಿಕೆಯ ಸಂಕೇತ

ಆ) ಮುದ್ರಾ ಲೋನ್ ಚಾರ್ಟರ್

ಇ) ಪಿಎಂಎಂವೈ ಲೋನ್ ಚಾರ್ಟರ್

**ಪ್ರಶ್ನೆ 30: ಆದಾಯವನ್ನು ತಂದುಕೊಡುವ ಉದ್ದೇಶದಡಿಯಲ್ಲಿ ಯಾವ ರೀತಿಯ ಎಂಎಸ್‌ಇ ಉದ್ದಿಮೆಗಳಿಗೆ ಮುದ್ರಾ ಯೋಜನೆ ಅನ್ವಯವಾಗುತ್ತದೆ?**

ಅ) ಹೊಸದಾಗಿ ಪ್ರಾರಂಭಿಸಿದವುಗಳಿಗೆ

ಆ) ಅಭಿವೃದ್ಧಿಗಾಗಿ ಅಥವಾ ಉನ್ನತೀಕರಣಕ್ಕಾಗಿ ಕಾಯುತ್ತಿರುವ ಅಸ್ತಿತ್ವದಲ್ಲಿರುವ ಉದ್ಯಮಗಳಿಗೆ

ಇ) ಈ ಮೇಲಿನ ಎರಡೂ

ಉತ್ತರಗಳು:

| | | | | | |
|---|---|---|---|---|---|
| 1. | ಆ | 11. | ಆ | 21. | ಅ |
| 2. | ಆ | 12. | ಅ | 22. | ಇ |
| 3. | ಆ | 13. | ಅ | 23. | ಆ |
| 4. | ಆ | 14. | ಇ | 24. | ಅ |
| 5. | ಅ | 15. | ಅ | 25. | ಆ |
| 6. | ಅ | 16. | ಅ | 26. | ಅ |
| 7. | ಇ | 17. | ಅ | 27. | ಇ |
| 8. | ಇ | 18. | ಇ | 28. | ಆ |
| 9. | ಅ | 19. | ಇ | 29. | ಆ |
| 10. | ಇ | 20. | ಇ | 30. | ಇ |